ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
KARNATAK UNIVERSITY DHARWAD
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
EXAMINATION SECTION
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ಸಂ.ಕವಿವಿ/ಪರೀಕ್ಷಾ-ಗೌಪ್ಯ/2025/ 576

ದಿನಾಂಕ : 07/11/2025

## ಸುತ್ತೋಲೆ

**ವಿಷಯ**:-ಡಿಸೆಂಬರ-2025 /ಜನೇವರಿ-2026ರಲ್ಲಿ ಜರುಗಲಿರುವ ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ ಬರುವ ಸ್ನಾತಕ ಪದವಿಗಳ 1,3,5 & 7ನೇ ಸೆಮಿಸ್ಟರ್ ಪರೀಕ್ಷಾ ಪೂರ್ವ ತಯಾರಿ ಕುರಿತು.

*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ ಸನ್ 2025-26ನೇ ಶೈಕ್ಷಣಿಕ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ ಪ್ರವೇಶ ಪಡೆದುಕೊಂಡು ಎಲ್ಲ ಸ್ನಾತಕ ಪದವಿಗಳ 1,3,5 & 7ನೇ ಸೆಮಿಸ್ಟರ್‌ನ ಪರೀಕ್ಷೆಗಳು ಡಿಸೆಂಬರ-2025 /ಜನೇವರಿ-2026ರಲ್ಲಿ ಜರುಗಲಿದ್ದು, ಸದರ ಪರೀಕ್ಷೆಗೆ ಪೂರ್ವ ತಯಾರಿ ಕುರಿತು ಈ ಕೆಳಗೆ ಸೂಚಿಸಿದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಿ ಅದರ ಪ್ರಕಾರ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

1. 2024-25ರಲ್ಲಿ 2, 4, & 6ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು Download ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
2. ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ 2024-25ರಲ್ಲಿ 2ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 3ನೇ ಸೆಮಿಸ್ಟರ್ ತರಗತಿಗೆ 4ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 5ನೇ ಸೆಮಿಸ್ಟರ್ ತರಗತಿಗೆ ಹಾಗೂ 6ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 7ನೇ ಸೆಮಿಸ್ಟರ್ ತರಗತಿಗೆ ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ Promote ಮಾಡುವುದು. ಸದರ ಪ್ರಕ್ರಿಯೆಯನ್ನು ದಿನಾಂಕ: 10.11.2025 ರಿಂದ ಪ್ರಾರಂಭಿಸುವದು.
3. Promote ಗೊಂಡ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಕೋರ್ಸು ನೊಂದಣಿ ಮಾಡಿಕೊಳ್ಳುವುದು ಹಾಗೂ ದಿನಾಂಕ:15.11.2025 ಒಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
4. ಕೋರ್ಸು ನೊಂದಣಿಗೊಂಡ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಳಿಸುವುದು ಸದರ ಪ್ರಕ್ರಿಯೆಯನ್ನು ದಿನಾಂಕ: 20.11.2025 ರಿಂದ ಒಳಗೆ ಪೂರ್ಣಗೊಳಿಸುವುದು.
5. ಕೋರ್ಸು ನೊಂದಣಿಗೊಂಡ ಹಾಗೂ ಪ್ರಾಚಾರ್ಯರಿಂದ UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಂಡ ವಿದ್ಯಾರ್ಥಿಗಳು 1 ,3, 5 & 7ನೇ ಸೆಮಿಸ್ಟರ (ರೆಗ್ಯೂಲರ್ / ರಿಪಿಟರ್) ವಿದ್ಯಾರ್ಥಿಗಳು ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮುಖಾಂತರ ಭರ್ತಿ ಮಾಡುವುದು.

ಸದರಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಪರೀಕ್ಷಾ ಸಾಮಾನ್ಯ ಆಡಳಿತ ವಿಭಾಗದಿಂದ ಅಧಿಸೂಚನೆಯನ್ನು ಹೊರಡಿಸಲಾಗುವುದು.

6. ರಾಷ್ಟ್ರೀಯ ಶಿಕ್ಷಣ ನೀತಿ NEP/Revised NEP ಅಡಿಯಲ್ಲಿ 1,3,5 & 7ನೇ ಸೆಮಿಸ್ಟರ್‌ನ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿದ ಹಾಗೂ ಶೇಕಡಾ 75% ರಷ್ಟು ಹಾಜರಾತಿ ಪೂರೈಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು Download ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಪೂರ್ಣಗೊಳಿಸುವುದು.
7. ದಿನಾಂಕ: 08.12.2025ರ ಒಳಗೆ ಪ್ರಾಯೋಗಿಕ ಬ್ಯಾಚ್‌ಗಳನ್ನು UUCMS ತಂತ್ರಾಂಶದ ಮುಖಾಂತರ ರಚಿಸುವುದು.
8. ದಿನಾಂಕ: 15.12.2025 ರಿಂದ ದಿನಾಂಕ: 29.12.2025ರ ಮಧ್ಯದಲ್ಲಿ ಪ್ರತಿ ಬ್ಯಾಚಿಗೆ ಕನಿಷ್ಟ 15 ವಿದ್ಯಾರ್ಥಿಗಳು ಅವಶ್ಯವಿದ್ದಲ್ಲಿ 20 ವಿದ್ಯಾರ್ಥಿಗಳ ಬ್ಯಾಚಗಳನ್ನು ರಚಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಿ ಪ್ರತಿ ದಿನದ ಪ್ರಾಯೋಗಿಕ ಅಂಕಗಳನ್ನು ಸದರಿ ದಿನದಂದು ತಪ್ಪದೇ UUCMS ತಂತ್ರಾಂಶದಲ್ಲಿ ನಮೂದಿಸುವುದು.

ಕುಲಸಚಿವರು(ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

**ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1. ಡಾ.ಗುರುರಾಜ ಹಡಗಲಿ, ನಿರ್ದೇಶಕರು, ಯುಯುಸಿಎಮ್‌ಎಸ್ ಘಟಕ, ಕ.ವಿ.ವಿ. ಧಾರವಾಡ.
2. ಸಿಸ್ಟಮ್‌ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.